ಇ) ಕರ್ನಾಟಕ ಗೃಹ ಮಂಡಳಿಯು ಕಳೆದ 3 ವರ್ಷಗಳಿಂದ ಒಟ್ಟು 18 ನಿವೇಶನ ಮತ್ತು ಸೇವೆಗಳ ಯೋಜನೆ, 2 ಸಂಯುಕ್ತ ವಸತಿ ಯೋಜನೆ ಮತ್ತು 1 ವಾಣಿಜ್ಯ ಮಳಿಗೆಗಳ ಕಾಮಗಾರಿಗಳನ್ನು ತೆಗೆದುಕೊಂಡಿದ್ದು (ಹೊಸ ಯೋಜನೆಗಳು) ಜೊತೆಗೆ ಚಾಲ್ತಿಯಲ್ಲಿನ ಯೋಜನೆಗಳ ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗಿದೆ. ಹಾಗೂ ಉತ್ತರ (ಅ)ರಲ್ಲಿ ತಿಳಿಸಿರುವ ಕಾಮಗಾರಿಗಳಿಗೆ 1998-99ರಲ್ಲಿ ರೂ. 18.89 ಕೋಟಿಗಳು 1999-2000ದಲ್ಲಿ ರೂ. 11.68 ಕೋಟಿಗಳು ಮತ್ತು 2000-01ರಲ್ಲಿ ರೂ. 21.14 ಕೋಟಿಗಳು ವೆಚ್ಚದ ಕಾಮಗಾರಿ ಕೆಲಸಗಳಲ್ಲಿ ಆರ್ಥಿಕ ಪ್ರಗತಿ ಸಾಧಿಸಲಾಗಿದೆ. ಆದ್ದರಿಂದ ಮಂಡಳಿಗೆ ನಷ್ಟವಾಗುವ ಪ್ರಮೇಯ ಉದ್ಭವಿಸುವುದಿಲ್ಲ.

ಕಂದಾಯ ಗ್ರಾಮ ಸಹಾಯಕರ ವೇತನ

230(2498)

ಶ್ರೀ ಪೂಜಾರ್ ಪಿ.ಹೆಚ್.(ಬಾಗಲಕೋಟೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಗ್ರಾಮ ಸಹಾಯಕರೆಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಇವರೆಲ್ಲರೂ ಕಳೆದ 22 ವರ್ಷಗಳಿಂದಲೂ, ಮಾಸಿಕ ನಿಗದಿತ ವೇತನದಲ್ಲಿ ಕೆಲಸ ಮಾಡುತ್ತಾ ಬಂದಿರುವುದು ನಿಜವೇ?

ಇ) ಇವರನ್ನು ಗ್ರೂಪ್ ಡಿ ವರ್ಗದ ನೌಕರರೆಂದು ಖಾಯಂಗೊಳಿಸಲು ಸಾರ್ವಜನಿಕರು ಮತ್ತು ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಮನವಿಗಳು ಬಂದಿರುವುದು ನಿಜವೇ?

ಈ) ಹಾಗಿದ್ದಲ್ಲಿ ಸರ್ಕಾರ ಈ ಕುರಿತಂತೆ ಕ್ರಮ ಕೈಗೊಳ್ಳುತ್ತದೆಯೇ (ವಿವರ ನೀಡುವುದು)

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) 9674,

ಜಿಲ್ಲಾವಾರು ಸಂಖ್ಯೆಯನ್ನು ಅನುಬಂಧದಲ್ಲಿ ನೀಡಿದೆ.

ಆ) ಹೌದು.

ಇ) ಹೌದು

ಈ) ಪ್ರಕರಣ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ.

ಅನುಬಂಧ

1.	ಬೆಂಗಳೂರು ನಗರ ಜಿಲ್ಲೆ	-	192
2.	ಬೆಂಗಳೂರು (ಗ್ರಾ) ಜಿಲ್ಲೆ	-	424
3.	ಕೋಲಾರ ಜಿಲ್ಲೆ	-	534
4.	ತುಮಕೂರು ಜಿಲ್ಲೆ	-	660
5.	ಚಿತ್ರದುರ್ಗ ಜಿಲ್ಲೆ	-	321
6.	ಶಿವಮೊಗ್ಗ ಜಿಲ್ಲೆ	-	163
7.	ದಾವಣಗೆರೆ ಜಿಲ್ಲೆ	-	278
8.	ಮೈಸೂರು ಜಿಲ್ಲೆ	-	464
9.	ಮಂಡ್ಯ ಜಿಲ್ಲೆ	-	497
10.	ಕೊಡಗು ಜಿಲ್ಲೆ	-	139
11.	ಚಿಕ್ಕಮಗಳೂರು ಜಿಲ್ಲೆ	-	197
12.	ಹಾಸನ ಜಿಲ್ಲೆ	-	430
13.	ದಕ್ಷಿಣ ಕನ್ನಡ ಜಿಲ್ಲೆ	-	318
14.	ಚಾಮರಾಜನಗರ ಜಿಲ್ಲೆ	-	239
15.	ಉಡುಪಿ ಜಿಲ್ಲೆ	-	238
16.	ಬೆಳಗಾವಿ ಜಿಲ್ಲೆ	-	740
17.	ಬಿಜಾಪುರ ಜಿಲ್ಲೆ	-	343
18.	ಬಾಗಲಕೋಟೆ ಜಿಲ್ಲೆ	-	357
19.	ಧಾರವಾಡ ಜಿಲ್ಲೆ	-	236

20.	ಗದಗ್ ಜಿಲ್ಲೆ	-	196
21.	ಹಾವೇರಿ ಜಿಲ್ಲೆ	-	368
22.	ಉತ್ತರ ಕನ್ನಡ ಜಿಲ್ಲೆ	-	400
23.	ಗುಲ್ಬರ್ಗಾ ಜಿಲ್ಲೆ	-	650
24.	ಬಳ್ಳಾರಿ ಜಿಲ್ಲೆ	-	402
25.	ರಾಯಚೂರು ಜಿಲ್ಲೆ	-	326
26.	ಬೀದರ್ ಜಿಲ್ಲೆ	-	346
27.	ಕೊಪ್ಪಳ ಜಿಲ್ಲೆ	-	216